
# ಸುದ್ದಿಸಂಚಯ

## ಮೈಸೂರಿಗೆ ಸ್ವಾಮಿ ಪ್ರಬುದ್ಧಾನಂದಜಿಯವರ ಭೇಟಿ



"ಪವಿತ್ರತೆ ಸ್ವಾತಂತ್ರ್ಯದ ಹಂಬಲ ನಮ್ಮ ನೈಜ ಸ್ವಭಾವವೆಂದು ನಮ್ಮ ದರ್ಶನಗಳು ಭರವಸೆ ನೀಡುತ್ತವೆ. ಉಪನಿಷತ್ತುಗಳ ಈ ಸತ್ಯಗಳನ್ನು ನಾವು ಅಧ್ಯಾತ್ಮ ಜೀವನ ಮತ್ತು ಸಾಧನೆಗಳಿಂದ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಆದರೆ ನಮ್ಮ ಸಾಧನೆಯಲ್ಲಿ ತೀವ್ರತೆಯಿರಬೇಕು. ತೀವ್ರತೆಯಿರದ ಸಾಧನೆಯಿಂದ ನಾವು ಮುಂದುವರೆಯಲು ಸಾಧ್ಯವಿಲ್ಲ. ತಾಳ್ಮೆಯಿಂದ ಸತ್ಸಂಗ, ಪ್ರಾರ್ಥನೆ, ಸಾಧಕರೊಡನೆ ವಿಚಾರವಿನಿಮಯ ಮುಂತಾದವುಗಳಿಂದ ನಾವು ಅಧ್ಯಾತ್ಮಸಿದ್ಧಿಯನ್ನು ಪಡೆಯಬಹುದು" ಎಂದು ಮೈಸೂರು ಶ್ರೀರಾಮಕೃಷ್ಣ ಆಶ್ರಮಕ್ಕೆ ಆಗಮಿಸಿದ್ದ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊ ವೇದಾಂತ ಸೊಸೈಟಿಯ ಮುಖ್ಯಸ್ಥರಾದ ಸ್ವಾಮಿ ಪ್ರಬುದ್ಧಾನಂದಜಿಯವರು ನುಡಿದರು. ೩.೦೯.೨೦೦೨, ಮಂಗಳವಾರ ಸಂಜೆ ಶ್ರೀರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಇದೇ ಸಂದರ್ಭದಲ್ಲಿ ವಿವೇಕಾನಂದರ ಜೀವನ-ಸಂದೇಶಕ್ಕೆ ಸಂಬಂಧಿಸಿದ **ಚಿತ್ರಪ್ರದರ್ಶನದ ಕಂಪ್ಯೂಟರ್ ಆವೃತ್ತಿಯ ಸಿ.ಡಿ**ಯನ್ನು ಮತ್ತು ಹಿಂದಿ ಭಜನೆಗಳನ್ನು ಹೊಂದಿರುವ **ವಂದನಾ** ಎಂಬ ಹೆಸರಿನ ೩ ಶ್ರಾವ್ಯ ಸಿ.ಡಿ.ಗಳನ್ನು ಹಾಗೂ ಅದೇ ಭಜನೆಗಳ ೪ ಕ್ಯಾಸೆಟ್‌ಗಳನ್ನು ಪೂಜ್ಯ ಸ್ವಾಮೀಜಿಯವರು ಬಿಡುಗಡೆ ಮಾಡಿದರು. ಈ ಭಜನೆಗಳನ್ನು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿಯವರೂ ಮತ್ತು ಸಂಗೀತ ವಿದ್ವಾನ್ ಶ್ರೀ ಗುರುರಾಜ್ ಅವರೂ ಹಾಡಿದ್ದಾರೆ. ಅತ್ಯಂತ ಜನಪ್ರಿಯವಾದ ಈ ಭಜನೆಗಳನ್ನು ಸಿ.ಡಿ. ಹಾಗೂ ಕ್ಯಾಸೆಟ್ ರೂಪದಲ್ಲಿ ಮೊಟ್ಟಮೊದಲ ಬಾರಿಗೆ ಈ ಆಶ್ರಮದಿಂದ ಹೊರತರಲಾಗಿದೆ. ಚಿತ್ರಪ್ರದರ್ಶನದ ಮತ್ತು ಭಜನೆಗಳ ಸಿ.ಡಿ ಒಂದರ ಬೆಲೆ ರೂ. ೧೦೦. ಕ್ಯಾಸೆಟ್ ನ ಬೆಲೆ ರೂ.೩೦.

ಸ್ವಾಮಿ ಪ್ರಬುದ್ಧಾನಂದಜಿಯವರು ೫.೦೯.೨೦೦೨ರಂದು ಬೆಳಗ್ಗೆ ೯.೦೦ ಗಂಟೆಗೆ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಕಂಪ್ಯೂಟರ್ ವಿಭಾಗವನ್ನು ಉದ್ಘಾಟಿಸಿದರು. ಸಂಸ್ಥೆಯ ಬಿ.ಎಡ್. ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತಂತ್ರಜ್ಞಾನವನ್ನು ನೀಡಲು ಈ ವಿಭಾಗವನ್ನು ಪ್ರಾರಂಭಿಸಲಾಗಿದೆ. ಉದ್ಘಾಟನೆಯ ನಂತರ ಪೂಜ್ಯ ಸ್ವಾಮೀಜಿಯವರು ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಉದ್ದೇಶಿಸಿ ಮಾತನಾಡಿ, "ನಾವು ನಮ್ಮ ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ರೂಢಿಸಿಕೊಂಡು ಅವನ್ನು ಇತರರಿಗೆ ತಿಳಿಸಿಕೊಡಬೇಕು," ಎಂಬ ವಿಷಯವನ್ನು ಒತ್ತಿ ಹೇಳಿದರು. ಅದೇ ಸಂಜೆ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಆವಾಸೀ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮನಮುಟ್ಟುವಂತೆ ಮಾತನಾಡಿದರು. "ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ನಿಯಮಿತವಾದ ಚೌಕಟ್ಟಿನಲ್ಲಿ ಹರಿಯುತ್ತಿರುವ ನಿಮ್ಮ ಈ ದಿನಚರಿಯ ಬದುಕು ನಿಮ್ಮನ್ನು ವಿಶಾಲ ಬದುಕಿಗೆ ಸಜ್ಜುಗೊಳಿಸುವುದರಲ್ಲಿ ಸಂದೇಹವಿಲ್ಲ. ನಿಮಗೆ ಗೊತ್ತಾಗದಂತೆಯೇ ಬದುಕನ್ನು ಎದುರಿಸಲು ಅತ್ಯವಶ್ಯವಾದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡಲು ಈ ದಿನಚರಿಯನ್ನು ರೂಪಿಸಲಾಗಿದೆ. ಇಲ್ಲಿ ನೀವು ಕಲಿಯುವ ಜೀವನದ ಪಾಠಗಳು ಅತ್ಯಮೂಲ್ಯವಷ್ಟೇ ಅಲ್ಲ, ಅವುಗಳನ್ನು ಕಲಿಯುವುದರಲ್ಲಿ ನಲಿವಿದೆ ಎಂಬುದನ್ನು ಮನಗಾಣುತ್ತೀರಿ. ಇಲ್ಲಿ **ಕಲಿಕೆ ನಲಿವಿನಿಂದ ಕೂಡಿದೆ, ನೋವಿನಿಂದಲ್ಲ.** ಇಲ್ಲಿ ಸ್ವಾಮೀಜಿಯವರ ಹಾಗೂ ಉಪಾಧ್ಯಾಯರ ಮಾರ್ಗದರ್ಶನ ನಿಮ್ಮ ಬದುಕನ್ನು ಸರ್ವಾಂಗಸುಂದರವಾಗಿಸುತ್ತದೆ" ಎಂದು ನುಡಿದರು.

ಸ್ವಾಮಿ ಪ್ರಬುದ್ಧಾನಂದಜಿಯವರು ಕನ್ನಡದವರೇ ಆಗಿದ್ದು ಈಗ ಸುಮಾರು ೩ ದಶಕಗಳಿಂದಲೂ ಅಮೆರಿಕದಲ್ಲಿ ವೇದಾಂತ ಪ್ರಚಾರದಲ್ಲಿ ತೊಡಗಿದ್ದಾರೆ. ಪೂಜ್ಯ ಸ್ವಾಮೀಜಿಯವರು ೩ ದಶಕಗಳ ಹಿಂದೆ ಬೆಂಗಳೂರಿನ ಶ್ರೀರಾಮಕೃಷ್ಣದಲ್ಲಿ ಅಧ್ಯಕ್ಷರಾಗಿದ್ದರು. ತಮ್ಮ ಆತ್ಮೀಯ ಮಾತುಕತೆಗಳಿಂದ ಅನೇಕರನ್ನು ಅಧ್ಯಾತ್ಮ ಜೀವನಕ್ಕೆ ಪ್ರೇರೇಪಿಸಿರುವ ಸ್ವಾಮೀಜಿಯವರು ಮೈಸೂರಿನ ಸುತ್ತ ಮುತ್ತ ಇರುವ ಸ್ವಯಂಸೇವಾಸಂಸ್ಥೆಗಳಿಗೂ ಭೇಟಿ ನೀಡಿದರು. ❖